ಮುಂತಾದ ಸೌಲಭ್ಯಗಳನ್ನು ಒದಗಿಸಿಕೊಡಲಾಗುತ್ತಿದೆ. ಅಲ್ಲದೆ ಕೇಂದ್ರ ಸರ್ಕಾರದ ಕಾರ್ಮಿಕ ಕಲ್ಯಾಣ ಸಂಸ್ಥೆಯ ಮೂಲಕ ಆರೋಗ್ಯ, ವಸತಿ, ವಿದ್ಯಾಭ್ಯಾಸಕ್ಕೆ ಧನ ಸಹಾಯ ಮತ್ತು ಮನರಂಜನೆ ಇತ್ಯಾದಿ ಹಲವಾರು ಕಲ್ಯಾಣ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ ಈ ಸವಲತ್ತುಗಳನ್ನು ಎಲ್ಲಾ ಅರ್ಹ ಬೀಡಿ ಕಾರ್ಮಿಕರು ಪಡೆಯುತ್ತಿದ್ದಾರೆ. ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವ ಬೀಡಿ ಕಾರ್ಮಿಕರ ಮಕ್ಕಳಿಗೆ ಸ್ಕಾಲರ್‌ಶಿಪ್ ಮತ್ತು ಸಮವಸ್ತ್ರಗಳನ್ನು ಕೊಳ್ಳಲು ಧನ ಸಹಾಯವನ್ನು ಕಾರ್ಮಿಕ ಕಲ್ಯಾಣ ಮಂಡಳಿಯು ನೀಡುತ್ತಿದೆ. ಸರ್ಕಾರವು ಬೀಡಿ ಕಾರ್ಮಿಕರಿಗೆ ಸಾಮೂಹಿಕ ವಿಮಾ ಯೋಜನೆಯನ್ನು ಸಹ ಜಾರಿಗೊಳಿಸಿದೆ.

ರಾಜ್ಯದಲ್ಲಿ ಬರಪರಿಹಾರ ಯೋಜನೆ

597 (1188) ಶ್ರೀ ಆತ್ಮಾನಂದ ಎಂ.ಎಸ್ (ಮಂಡ್ಯ): ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಬರ ಪರಿಸ್ಥಿತಿಯನ್ನು ಎದುರಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು;

ಆ) ರಾಜ್ಯದಲ್ಲಿನ ವಿವಿಧ ಜಿಲ್ಲೆಗಳಿಗೆ ಸರ್ಕಾರವು ಬಿಡುಗಡೆ ಮಾಡಿರುವ ಆರ್ಥಿಕ ಅನುದಾನ ಹಾಗೂ ಆಹಾರಧಾನ್ಯಗಳ ವಿವರವೇನು;

ಇ) ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಎದುರಿಸಲು ಬರಪರಿಹಾರ ಯೋಜನೆಯಡಿ ಕ್ರಮ ಕೈಗೊಳ್ಳಲಾಗಿದೆಯೇ;

ಈ) ಕ್ರಮ ಕೈಗೊಂಡಿದ್ದಲ್ಲಿ ಸಿದ್ಧತೆಗಳ ವಿವರವೇನು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು) :

ಅ) 1. ಉದ್ಯೋಗ ಸೃಜನೆ ಕಾಮಗಾರಿಗಳಿಗಾಗಿ ಆಹಾರ ದಾನ್ಯ ಹಾಗೂ ಅನುದಾನ ಬಿಡುಗಡೆ ಮಾಡಲಾಗಿದೆ.

2. ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಾಗಿ ಕ್ರಮ ಕೈಗೊಳ್ಳಲಾಗಿದೆ.

3. ಜಾನುವಾರುಗಳಿಗೆ ಮೇವು ಕೊರತೆಯಾಗದಂತೆ ನೋಡಿಕೊಳ್ಳಲು ಮೇವು ಸಾಗಾಣಿಕೆ, ಸರ್ಕಾರಿ ಫಾರ್ಮ್‌ಗಳಲ್ಲಿ ಮೇವು ಬೆಳೆಸುವಿಕೆ, ಔಷಧಿ ಖರೀದಿ ಇತ್ಯಾದಿ ಉದ್ದೇಶಗಳಿಗಾಗಿ ಅನುದಾನ ಬಿಡುಗಡೆ ಮಾಡಿದೆ.

4. ರೈತರಿಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ಕೃಷಿ ಪರಿಕರಗಳ ವಿತರಣೆ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.

5. ರೈತರಿಗೆ ಬೆಳೆ ವಿಮಾ ಯೋಜನೆ ಪಾವತಿ, ಸಾಲದ ಬಡ್ಡಿ ಮನ್ನಾ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.

ಆ) ಆರ್ಥಿಕ ಅನುದಾನ ಒಟ್ಟು ರೂ. 187.11 ಕೋಟಿ ಹಾಗೂ 3.65 ಮೆ.ಟನ್ ಆಹಾರ ಧಾನ್ಯವನ್ನು ಇದುವರೆಗೆ ಬಿಡುಗಡೆ ಮಾಡಲಾಗಿದೆ.

ಇ) ಹೌದು.

ಈ) ನಗರ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಾಗಿ ಪ್ರತ್ಯೇಕವಾಗಿ ರೂ. 21.40 ಕೋಟಿ ಬಿಡುಗಡೆ ಮಾಡಲಾಗಿದೆ. ಎನ್‌ಸಿಸಿಎಫ್ ನಿಧಿಯಿಂದ ರೂ. 14.00

ಕೋಟಿ ಬಿಡುಗಡೆ ಮಾಡಲಾಗಿದೆ. ಹಾಲಿ ಇರುವ ಬೋರ್‌ವೆಲ್‌ಗಳ ದುರಸ್ಥಿ, ಹೈಡ್ರೋಫ್ರಾಕ್ಚರಿಂಗ್ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಕುಡಿಯುವ ನೀರನ್ನು ಟ್ಯಾಂಕರ್ ಮೂಲಕ ಸರಬರಾಜು ಮಾಡಲಾಗುತ್ತಿದೆ.

ಬೆಂಗಳೂರು - ಮೈಸೂರು ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸುವುದು

598 (1189) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳೆಷ್ಟು; ಅವು ಯಾವುವು;

ಆ) ರಾಜ್ಯ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಲು ಅನುಸರಿಸುವ ಮಾದಂಡಗಳೇನು;

ಇ) ರಾಜ್ಯದಲ್ಲಿ ಅತೀ ಹೆಚ್ಚಿನ ವಾಹನ ಸಂಚಾರವುಳ್ಳ ಹಾಗೂ ಪ್ರಮುಖ ರಾಜ್ಯ ಹೆದ್ದಾರಿಗಳಲ್ಲಿ ಒಂದಾದ ಬೆಂಗಳೂರು ಮೈಸೂರು ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಲು ಸರ್ಕಾರವು ಕ್ರಮ ಕೈಗೊಂಡಿದೆಯೇ;

ಈ) ಕೈಗೊಳ್ಳದಿದ್ದಲ್ಲಿ ಕಾರಣಗಳೇನು; ಈ ಬಗ್ಗೆ ಯಾವ ಕಾರ್ಯಪ್ರವೃತ್ತವಾಗುತ್ತದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 13 ರಾಷ್ಟ್ರೀಯ ಹೆದ್ದಾರಿಗಳಿವೆ, ಅವುಗಳ ವಿವರ ಅನುಬಂಧ - ಅ ದಲ್ಲಿ ನೀಡಿದೆ.

ಆ) ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸಲು ಅನುಸರಿಸುವ ಮಾನದಂಡಗಳ ವಿವರಗಳು ಕೆಳಕಂಡಂತಿದೆ.

1. ರಸ್ತೆಯು ದೇಶದ ಭಾಗಗಳಲ್ಲಿ ಹಾದು ಹೋಗಬೇಕು.
2. ರಸ್ತೆಯು ನೆರಹೊರೆಯ ರಾಷ್ಟ್ರಗಳನ್ನು ಸಂಪರ್ಕಿಸಬೇಕು.
3. ರಸ್ತೆಯು ದೇಶದ ರಾಜಧಾನಿಯನ್ನು ರಾಜ್ಯದ ರಾಜಧಾನಿಗಳೊಂದಿಗೆ ಸಂಪರ್ಕಿಸುತ್ತಿರಬೇಕು ಇಲ್ಲವೇ ರಾಜ್ಯದ ರಾಜಧಾನಿಗಳನ್ನು ಒಂದಕ್ಕೊಂದು ಸಂಪರ್ಕಿಸುತ್ತಿರಬೇಕು.
4. ರಸ್ತೆಯು ಬೃಹತ್ ಬಂದರುಗಳನ್ನು ವಿಶಾಲವಾದ ಐತಿಹಾಸಿಕ ಕೇಂದ್ರಗಳನ್ನು ಇಲ್ಲವೇ ಪ್ರವಾಸಿ ಸ್ಥಾನಗಳನ್ನು ಸಂಪರ್ಕಿಸುತ್ತಿರಬೇಕು.
5. ರಸ್ತೆಯು ಅತಿ ಪ್ರಮುಖವಾದ ಆಯಕಟ್ಟಿನ ಅವಶ್ಯಕತೆಗಳನ್ನು ಪೂರೈಸುವಂತಿರಬೇಕು.
6. ಗಣನೀಯ ಪ್ರಮಾಣದಲ್ಲಿ ಪ್ರಯಾಣದ ಅಂತರವನ್ನು ಕಡಿಮೆ ಮಾಡುವ ಹಾಗೂ ಆರ್ಥಿಕ ಪ್ರಗತಿಗೆ ಒತ್ತು ನೀಡುವ ರಸ್ತೆಯಾಗಿರಬೇಕು.
7. ವಿಶಾಲವಾಗಿ ಹಿಂದುಳಿದ ಪ್ರದೇಶಗಳನ್ನು ಹಾಗೂ ಗುಡ್ಡಗಾಡಿನ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯಾಗಿರಬೇಕು.
8. ರಾಷ್ಟ್ರೀಯ ಹೆದ್ದಾರಿ 100 ಕಿಮೀ ಪರಿಮಾಣವನ್ನು ಸಾಧಿಸುವಂತಿರಬೇಕು.
9. ರಾಜ್ಯ ಹೆದ್ದಾರಿಗೆ ನಿಗದಿಪಡಿಸಲಾದ ತಾಂತ್ರಿಕ ಕಾರಣಗಳು ಹಾಗೂ ಅವಶ್ಯವಾದ ಭೂಮಿಯ ಅಗಲವನ್ನು ಹೊಂದಿರಬೇಕು.